# ಬೇಡಿ: ಬತ್ತದ ಜೀವನೋತ್ಸಾಹ

72ರ ಇಳಿವಯಸ್ಸಿನಲ್ಲೂ ಕಬೀರ್ ಬೇಡಿ ನವತರುಣರನ್ನು ನಾಚಿಸುವಂತೆ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಕಳೆದ ವಾರ ಹೊಸ ಪಂಜಾಬಿ ಸಿನಿಮಾದಲ್ಲಿ ಮುಖ್ಯ ಪಾತ್ರವೊಂದನ್ನು ಮಾಡಲು ಕಬೀರ್ ಸಹಿ ಹಾಕಿದ್ದು ಸುದ್ದಿಯಾಗಿದೆ. 'ಯಾರೀ ತೆ ಸರ್ದಾರಿ' ಎನ್ನುವುದು ಸಿನಿಮಾದ ಹೆಸರು. 2011ರಲ್ಲಿ ಬಂದ 'ಯಾರಾ ಓ ದಿಲ್‌ದಾರಾ' ಚಿತ್ರದ ಬಳಿಕ ಪಂಜಾಬಿ ಚಿತ್ರಗಳಲ್ಲಿ ನಟಿಸಲು ಕಬೀರ್‌ಬೇಡಿ ಹಲವು ನಿರ್ಮಾಪಕರಿಗೆ 'ನೋ' ಎಂದದ್ದಿದೆ. 'ಚಿತ್ರಕಥೆ ಚೆನ್ನಾಗಿರಲಿಲ್ಲ, ಈಗ ಸಹಿ ಹಾಕಿರುವ ಚಿತ್ರದ ಕಥೆ ತುಂಬ ಚೆನ್ನಾಗಿದೆ' ಎನ್ನುವುದು ಕಬೀರ್ ಸಮಜಾಯಿಷಿ. ಅಂದ ಹಾಗೆ ಕಬೀರ್ ಬೇಡಿ ನಟಿಸಿರುವ, ಸಂಜಯ್ ದತ್ ಹೀರೋ ಆಗಿರುವ 'ಸಾಹೆಬ್ ಬೀವಿ ಔರ್ ಗ್ಯಾಂಗ್‌ಸ್ಟರ್–3' ಹಿಂದಿ ಚಿತ್ರದ ಶೂಟಿಂಗ್ ಬಹುತೇಕ ಮುಗಿದಿದೆ. ಜೂನ್‌ನಲ್ಲಿ ಬಿಡುಗಡೆ ದಿನಾಂಕವೂ ನಿಗದಿಯಾಗಿದೆ.

ಸ್ಪುರದ್ರೂಪಿ ಕಬೀರ್ ಬೇಡಿ, ಟೀವಿ, ಸಿನಿಮಾ ಮತ್ತು ರಂಗಭೂಮಿ– ಮೂರೂ ಕಡೆ ಈಗಲೂ ಸಕ್ರಿಯವಾಗಿದ್ದಾರೆ. ತಂದೆ ಬಾಬಾ ಪ್ಯಾರೇಲಾಲ್ ಸಿಂಗ್ ಬೇಡಿ ಲೇಖಕರಾಗಿ ಮತ್ತು ತತ್ವಶಾಸ್ತ್ರಜ್ಞರಾಗಿ ಪ್ರಸಿದ್ಧರು. ತಾಯಿ ಫ್ರೀಡಾ ಇಂಗ್ಲೆಂಡಿನಲ್ಲಿ ಜನಿಸಿದಾಕೆ. ಇಬ್ಬರೂ ಆಕ್ಸ್‌ಫರ್ಡ್‌ನಲ್ಲಿ ಓದುತ್ತಿದ್ದಾಗ ಪ್ರೇಮಿಸಿ ಮದುವೆಯಾದವರು. ಸ್ವಾತಂತ್ರ್ಯ ಹೋರಾಟದ ವೇಳೆ ಸ್ವದೇಶಕ್ಕೆ ಮರಳಿದ ಪ್ಯಾರೇಲಾಲ್ ಜತೆಗೆ ಫ್ರೀಡಾ ಅವರೂ ಬಂದರು. ಬಂದದ್ದು ಮಾತ್ರವಲ್ಲ, ಗಾಂಧೀಜಿ ನೇತೃತ್ವದಲ್ಲಿ ಹೋರಾಟಕ್ಕೆ ಧುಮುಕಿ ಹಲವು ಸಲ ಜೈಲುವಾಸವನ್ನೂ ಅನುಭವಿಸಿದರು. ಇಂಗ್ಲೆಂಡಿನ ದಬ್ಬಾಳಿಕೆ ವಿರುದ್ಧ ಇಂಗ್ಲೆಂಡಿನಿಂದಲೇ ಬಂದ ಹೆಣ್ಣುಮಗಳೊಬ್ಬಳು ಹೋರಾಟ ಮಾಡಿದ್ದು ಆಗ ದೊಡ್ಡ ಸುದ್ದಿ. ಕಬೀರ್ ಈಗಲೂ ಅಮ್ಮನನ್ನು ನೆನಪಿಸಿಕೊಳ್ಳುತ್ತಾರೆ. 'ನನ್ನ ಜೀವನದಲ್ಲಿ ಅತ್ಯಧಿಕ ಪ್ರಭಾವ ಬೀರಿದ ಹೆಣ್ಣುಮಗಳು' ಎನ್ನುವುದು ಅಮ್ಮನ ಕುರಿತ ಕಬೀರ್ ಮಾತು. ಟಿಬೆಟನ್ ಬುದ್ಧಿಸಂ ಸ್ವೀಕರಿಸಿ ಇಂಗ್ಲಿಷ್‌ನಲ್ಲಿ ಬೌದ್ಧಧರ್ಮದ ಬಗ್ಗೆ ಸಾಕಷ್ಟು ಬರೆದೂ ಆಕೆ ಹೆಸರುವಾಸಿಯಾದರು.

'ಹೆಣ್ಣುಗಳೆಂದರೆ ಕಬೀರ್‌ಗೆ ಎಲ್ಲಿಲ್ಲದ ಪ್ರೀತಿ' ಎಂದು ಕುಹಕ ಮಾಡುವವರೂ ಇದ್ದಾರೆ. ಅದಕ್ಕೂ ಕಾರಣವಿದೆ. ಬರೋಬ್ಬರಿ ಮೂರು ಮದುವೆಯಾಗಿ ಮೂವರಿಗೂ ಡೈವೋರ್ಸ್ ಕೊಟ್ಟಾತ ಈ ಬೇಡಿ. ಮೊದಲ ಪತ್ನಿ ಪ್ರೊತಿಮಾ ಬೇಡಿ ಜತೆಗಿದ್ದು ಪ್ರೀತಿ– ಜಗಳದ ದಾಂಪತ್ಯ. ಕಳೆದ ಶತಮಾನದ 70ರ ದಶಕದಲ್ಲಿ ಇಬ್ಬರೂ 'ಲಿವ್ ಇನ್ ರಿಲೇಷನ್' ಒಪ್ಪಿಕೊಂಡು ಒಟ್ಟಿಗೆ ಬದುಕಿದ್ದು ಆಗ ವಿವಾದವನ್ನೂ ಹುಟ್ಟುಹಾಕಿತ್ತು. ಪ್ರೊತಿಮಾ ಜತೆಗಿನ ದಾಂಪತ್ಯ ಕಡಿದುಕೊಂಡ ಬಳಿಕ ಕಬೀರ್ ಮತ್ತು ಚಿತ್ರನಟಿ ಪರ್ವೀನ್ ಬಾಬಿ ಜತೆಯಾಗಿ ವಾಸಿಸಿದರು. ಆದರೆ ಮದುವೆಯಾಗಲಿಲ್ಲ. ಪರ್ವೀನ್ ಜತೆಗಿನ ಪ್ರೀತಿ ಮುಗಿದ ಬಳಿಕ, ಕಬೀರ್ ಮದುವೆಯಾದದ್ದು ಬ್ರಿಟನ್ನಿನ ಫ್ಯಾಷನ್ ಡಿಸೈನರ್ ಸುಸಾನ್ ಹಂಫ್ರೀಸ್ ಜತೆಗೆ. (ಈ ದಂಪತಿಯ ಮಗ ಖ್ಯಾತ ಮಾಡೆಲ್ ಆದಂ ಬೇಡಿ ನಟಿಸಿದ ಹಿಂದಿ ಥ್ರಿಲ್ಲರ್ ಚಿತ್ರ 'ಹಲೋ.. ಕೌನ್ ಹೈ' ಫ್ಲಾಪ್ ಆಯಿತು.) ಸುಸಾನ್ ಜತೆಗಿನ ಮದುವೆ ಕೂಡಾ ಮುರಿದುಬಿತ್ತು. 90ರ ದಶಕದಲ್ಲಿ ಮೂರನೇ ಪತ್ನಿಯಾಗಿ ಬಂದಾಕೆ ಟಿವಿ, ರೇಡಿಯೊ ನಿರೂಪಕಿ ನಿಕ್ಕಿ ಬೇಡಿ. 2005ರಲ್ಲಿ ಅದೂ ಮುರಿದು ಬಿತ್ತು.

ಎರಡು ವರ್ಷಗಳ ಹಿಂದೆ ಕಬೀರ್ ಬೇಡಿ ನಾಲ್ಕನೇ ಮದುವೆಯಾದದ್ದು ತನ್ನ 70ನೇ ಹುಟ್ಟುಹಬ್ಬದ ಒಂದು ದಿನ ಮೊದಲು! ನಾಲ್ಕನೇ ಪತ್ನಿ ಪರ್ವೀನ್ ದುಸಾಂಜ್ ಈಗಲೂ ಜತೆಗೇ ಇದ್ದಾರೆ. ಗಂಡ ಹೆಂಡತಿಯ ಮಧ್ಯೆ ವಯಸ್ಸಿನಲ್ಲಿ 30 ವರ್ಷಗಳ ಅಂತರ ಇದ್ದರೂ ಪ್ರೀತಿಗೆ ಕೊರತೆ ಇಲ್ಲವಂತೆ. ಮದುವೆಗೆ ಮುನ್ನ ಸುಮಾರು 10 ವರ್ಷಗಳ ಕಾಲ ಇಬ್ಬರೂ ಜತೆಯಾಗಿ ವಾಸಿಸಿದ್ದೂ ಇದಕ್ಕೆ ಕಾರಣ ಇರಬಹುದು.

ಪ್ರೊತಿಮಾರಿಂದ ಹುಟ್ಟಿದ ಮಗ ಸಿದ್ದಾರ್ಥ ಅಮೆರಿಕದಲ್ಲಿ ಓದುತ್ತಿದ್ದವನು 26ರ ಹರೆಯದಲ್ಲಿ ಸೂಸೈಡ್ ಮಾಡಿಕೊಂಡ. ನಾಲ್ಕನೇ ಮದುವೆಯಾದಾಗ ಪ್ರೊತಿಮಾ ಮಗಳು ಪೂಜಾ ಬೇಡಿ, ಅಪ್ಪನ ವಿರುದ್ಧ ಅತೃಪ್ತಿ ತೋಡಿಕೊಂಡದ್ದುಂಟು. ಆದರೆ ಇದ್ಯಾವುದೂ ಕಬೀರ್ ಜೀವನೋತ್ಸಾಹವನ್ನು ಕಡಿಮೆ ಮಾಡಿಲ್ಲ. ಮೊದಲ ಮದುವೆ 5 ವರ್ಷ, ಎರಡನೆ ಮದುವೆ 9 ವರ್ಷ ಮತ್ತು ಮೂರನೇ ಮದುವೆ 12 ವರ್ಷ ಬಾಳಿಕೆ ಬಂದಿದ್ದು, ನಾಲ್ಕನೇ ಮದುವೆ ಜೀವನಪರ್ಯಂತ ಇರಬಹುದು ಎಂದು ಕಾಲೆಳೆಯುವವರೂ ಇದ್ದಾರೆ.

ಸುಮಾರು 60 ಭಾರತೀಯ ಸಿನಿಮಾಗಳಲ್ಲಿ ನಟಿಸಿರುವ ಕಬೀರ್‌ಗೆ, ತೆಲುಗು, ತಮಿಳು, ಇಂಗ್ಲಿಷ್, ಇಟಾಲಿಯನ್, ಪಂಜಾಬಿ– ಹೀಗೆ ಎಲ್ಲ ಭಾಷೆಯ ಚಿತ್ರಗಳೂ ಸೈ. ಇಟಾಲಿಯನ್ ರಂಗಭೂಮಿಯಲ್ಲೂ ಈತ ಸಾಕಷ್ಟು ಜನಪ್ರಿಯ. ಯೂರೋಪ್ ಮತ್ತು ಅಮೆರಿಕದಲ್ಲಿ ಜನಪ್ರಿಯ ಟಿವಿ ನಟ. ಬಾಲಿವುಡ್‌ನಲ್ಲಿ ಶಾರೂಕ್, ಗೋವಿಂದ, ಹೃತಿಕ್ ರೋಷನ್, ಅಕ್ಷಯ ಕುಮಾರ್ ಮುಂತಾದ ಖ್ಯಾತನಾಮರ ಜತೆಗೆ ನಟಿಸಿರುವ ಕಬೀರ್, ಈಗ ಸಂಜಯ್ ದತ್ ಜತೆಗಿನ ಸಿನಿಮಾದ ಕುರಿತೂ ಉತ್ಸಾಹದಿಂದ ಮಾತನಾಡುತ್ತಾರೆ. 'ಆರಂಭದಲ್ಲಿ ನಾನು ಹಿಂದಿ ಚಿತ್ರರಂಗಕ್ಕೆ ಬಂದಾಗ ಗಂಭೀರ ಪಾತ್ರಗಳನ್ನಷ್ಟೇ ಬಯಸಿದೆ. ಸಿನಿಮಾದಲ್ಲಿ ಕುಣಿಯುವುದು, ಹಾಡುವುದು ನನಗೆ ಇಷ್ಟವಿರಲಿಲ್ಲ. ಆಗ ಹಾಡು– ಕುಣಿತದಲ್ಲಿ ಭಾಗವಹಿಸಿದ್ದರೆ ದೊಡ್ಡ ಹೀರೊ ಆಗುತ್ತಿದ್ದೆನೋ ಏನೋ.. ಎಂದೀಗ ಅನ್ನಿಸುತ್ತದೆ' ಎಂದು ಇತ್ತೀಚೆಗೆ ಹೇಳಿದ್ದೂ ಉಂಟು. ಮೂರು ದಶಕಗಳ ಚಿತ್ರಜೀವನ, ಮೂರು ಮಾಧ್ಯಮಗಳಲ್ಲಿ ಜನಪ್ರಿಯತೆ, ಮೂರು ಡೈವೋರ್ಸ್‌ಗಳನ್ನು ದಾಟಿ ಬಂದಾತ, ಈಗ 'ಸಾಹೆಬ್, ಬೀಬಿ ಔರ್ ಗ್ಯಾಂಗ್‌ಸ್ಟರ್' ಚಿತ್ರದ ಮೂರನೇ ಭಾಗದಲ್ಲಿ ನಟಿಸಿದ್ದಾರೆ. 'ನನ್ನ ಮದುವೆಗಳನ್ನು ಲೇವಡಿ ಮಾಡುತ್ತಾರೆ. ಆದರೆ ಮನುಷ್ಯನ ಜೀವನದಲ್ಲಿ ಅಗಲಿಕೆ ಉಂಟು ಮಾಡುವ ನೋವನ್ನು ಅತಿ ಹೆಚ್ಚು ಉಂಡವನು ನಾನು ಎನ್ನುವುದು ನೆನಪಿರಲಿ. ಯಾವುದೇ ಸಂಬಂಧಗಳಲ್ಲಿ ನನ್ನ ಜವಾಬ್ದಾರಿಯನ್ನು ನಾನು ಸರಿಯಾಗಿಯೇ ನಿರ್ವಹಿಸಿದ್ದೇನೆ' ಎಂದು ಕಳೆದ ವಾರದ ಸಂದರ್ಶನವೊಂದರಲ್ಲಿ ಕಬೀರ್ ಹೇಳಿರುವುದು ಆತನ ಗಂಭೀರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65